



ಹಾಗಾಗಿ ಇದು ತುಸು ನಾಜೂಕಿನ ಆಭರಣವೇ ಎನ್ನುತ್ತಾರೆ ಸ್ವರ್ಣ ಸಂಕಲ್ಪದ ಆಭರಣ ಮಳಿಗೆಯ ವಿನ್ಯಾಸಗಾರ್ತಿ ಶ್ರೇಯಾ ಶೆಟ್ಟಿ.

## ಏನೆಲ್ಲ ಇರುತ್ತೆ?

ಕಿವಿ, ಕತ್ತು, ಕೈ ಹೀಗೆ ಒಂದಕ್ಕೊಂದು ಹೊಂದಿಕೆಯಾಗುವ ಆಭರಣಗಳನ್ನು ತಯಾರಿಸಲಾಗುತ್ತದೆ. ಇದಲ್ಲದೆ ಬಗೆ ಬಗೆಯ ಹಾರಗಳು, ಕಿವಿಯೋಲೆಗಳು, ಬಳೆಗಳು ಸೊಂಟದ ಪಟ್ಟಿ, ಮೂಗುತಿ, ತಲೆಕೂದಲಿಗೆ ಸಿಕ್ಕಿಸುವ ಆಭರಣಗಳು, ಪೆಂಡೆಂಟ್ಸ್‌ಗಳನ್ನು ಕುಂದನ್ ಶೈಲಿಯಲ್ಲಿ ತಯಾರಿಸಲಾಗುತ್ತದೆ. ಇದನ್ನು ಧರಿಸುವ ಮದುಮಗಳು ರಾಜವೈಭೋಗದಲ್ಲಿರುವ ರಾಣಿಯಂತೆ ಕಂಡರೆ ಆಶ್ಚರ್ಯಪಡಬೇಕಿಲ್ಲ.

ಹರಳುಗಳ ಉಪಯೋಗಕ್ಕೆ ಹೆಚ್ಚು ಒತ್ತು ನೀಡುವುದರಿಂದ ತುಸು ಭಾರವಾಗಿಯೇ ಇರುತ್ತದೆ. ಬೆಳ್ಳಿ ಮತ್ತು ಇತರೆ ಲೋಹ ಬಳಸಿ ಕುಂದನ್ ಕೂಡಿಸುವ ಪ್ರಯೋಗಗಳು ನಡೆದಿವೆ. ಆದರೆ, ಅದು ಮಾರುಕಟ್ಟೆಯ ಗಮನ ಸೆಳೆಯಲು ವಿಫಲವಾಯಿತು. ಇನ್ನೂ ನಾಜೂಕಿನ ಚರ್ಮದವರು ಈ ಹರಳಿನ ಹಾರವನ್ನು ತುಂಬಾ ಕಾಲ ಧರಿಸಿರುವುದು ತುಸು ಕಷ್ಟವೇ.

## ಮಾಣಿಕ್ಯ-ಪಚ್ಚೆ ವಿನ್ಯಾಸ

ಮತ್ತೊಂದು ಸಾಂಪ್ರದಾಯಿಕ ಮಾದರಿಯ ಆಭರಣವೆಂದರೆ ಮಾಣಿಕ್ಯ–ಪಚ್ಚೆ. ಇದು ಕುಂದನ್ ಶೈಲಿಯಲ್ಲ. ಆದರೆ, ಈ ಎರಡೂ ಹರಳುಗಳನ್ನು ಬಳಸಿ ಸಾಂಪ್ರದಾಯಿಕ ಆಭರಣದಂತೆ ರೂಪಿಸಲಾಗುತ್ತದೆ. ಇದು ಸಾಂಪ್ರದಾಯಿಕ ಉಡುಗೆ–ತೊಡುಗೆಗಳಿಗೆ ಹೊಂದುತ್ತವೆ. ಇದರಲ್ಲಿ ಹಾರ ಮತ್ತು ನೆಕ್ಲೇಸ್ ವಿನ್ಯಾಸಗಳು ಹೆಚ್ಚು ಚಾಲ್ತಿಯಲ್ಲಿವೆ. ಇದರ ನಿರ್ವಹಣೆಯು ಕಷ್ಟವೇನಲ್ಲ. ಎಲ್ಲ ಆಭರಣಗಳಂತೆ ಇದನ್ನು ಬಳಸಬಹುದು.

## ಲಿಂಗ ಪದಕ ಮುತ್ತು

ಲಿಂಗದ ಪದಕ ಇರುವ ಮುತ್ತಿನ ಹಾರವು ಹಳೆಯ ಕಾಲದ ಆಭರಣವಾಗಿದ್ದರೂ ಇದು ಈಗ ಮತ್ತೆ ಮಾರುಕಟ್ಟೆಯಲ್ಲಿ ಕಾಣಿಸಿಕೊಂಡಿದೆ. ತಮಿಳುನಾಡಿನ ಮೂಲದ ಈ ಆಭರಣ ರೇಷ್ಮೆ ಸೀರೆಗೆ ಒಪ್ಪುತ್ತದೆ. ಮುತ್ತಿನ ಹಾರದ ಮಧ್ಯೆ ಶಿವನ ಲಿಂಗವಿದ್ದು ಅದಕ್ಕೆ ಹೊಂದಿಕೊಂಡಂತೆ ಆಚೆ ಈಚೆ ಎರಡು ನವಿಲಿನ ಚಿತ್ರವಿರುತ್ತದೆ.

ಮೊದಲಿನಿಂದಲೂ ದಕ್ಷಿಣ ಭಾರತವು ಮುತ್ತಿನ ಆಭರಣಗಳಿಗೆ ಹೆಸರುವಾಸಿಯಾಗಿದ್ದು, ರಾಜರ ಕಾಲದಲ್ಲಿಯೂ ಹೆಚ್ಚು ಬಳಕೆಯಲ್ಲಿತ್ತು. ವಿಜಯನಗರ ಹಾಗೂ ತಂಜಾವೂರು ಸಾಮ್ರಾಜ್ಯದಲ್ಲಿ ಮುತ್ತಿನ ಬಗೆ ಬಗೆಯ ವಿನ್ಯಾಸದ ಹಾರಗಳು ಬಳಕೆ ಬಂದವು. ಈಗೀಗ ಕಾಲೇಜು ಹುಡುಗಿಯರಿಂದ ಮದುಮಗಳವರೆಗೆ ಈ ಆಭರಣವನ್ನು ಹೆಚ್ಚು ಇಷ್ಟಪಟ್ಟು ಖರೀದಿಸುವವರಿದ್ದಾರೆ.

## ವಂಕಿ

ಮಾಣಿಕ್ಯ ಮತ್ತು ಪಚ್ಚೆಯ ಹರಳು ಬಳಸಿ ಮಾಡುವ ತೋಳಬಂದಿಗೆ ಉತ್ತಮ ಬೇಡಿಕೆ ಇದೆ. ಸಾಮಾನ್ಯವಾಗಿ ಈ ಆಭರಣದಲ್ಲಿ ಎರಡು ಪುಟ್ಟ ಗಿಳಿಮರಿಯೊಂದಿಗೆ ಕಮಲದ ವಿನ್ಯಾಸವಿರುತ್ತದೆ. ಸಾಮಾನ್ಯ ದಕ್ಷಿಣ ಭಾರತದಲ್ಲಿ 'ವಿ' ಆಕಾರದ ವಂಕಿ ವಿನ್ಯಾಸಗಳನ್ನು ಬಳಸಲಾಗುತ್ತದೆ. ತೋಳಿಗೆ ಯಾವುದೇ ಒತ್ತಡ ಕೊಡದೇ ಏರಿಸಬಲ್ಲ ಈ ಆಭರಣವನ್ನು ತೊಟ್ಟರೆ ಸಾಂಪ್ರದಾಯಿಕ ವ್ಯಕ್ತಿತ್ವವನ್ನು ನೋಡುಗರಿಗೆ ಕಟ್ಟಿಕೊಡುತ್ತದೆ.

## ಕಡಗ

ಪಚ್ಚೆ, ಮಾಣಿಕ್ಯ ಹಾಗೂ ಅರಗು ಬಳಸಿ ಕಡಗ ತಯಾರಿಸಲಾಗುತ್ತದೆ. ಗಿಳಿಮರಿಗಳು, ಪುಟ್ಟ ಆನೆಗಳ ಕುಸುರಿ ಕಲೆಯಿರುವ ಕಡಗಗಳಿಗೆ ಹೆಚ್ಚಿನ ಬೇಡಿಕೆ ಇದೆ.



## ನಿರ್ವಹಣೆ ಹೇಗೆ?

ಈ ಆಭರಣವು ನಾಜೂಕಿನಾದ್ದಾಗಿರುವುದರಿಂದ ತೇವಾಂಶದಿಂದ ದೂರವಿಡಬೇಕು. ಆಭರಣದ ಮೇಲೆ ದೂಳು, ಬೆವರು ಇದ್ದರೆ ಹತ್ತಿಯಿಂದ ಒರೆಸಿಡುವುದು ಸೂಕ್ತ.

ವ್ಯಾಕ್ಸ್ (ಒಂದು ಬಗೆಯ ಮಣ್ಣು, ಮೇಣವಲ್ಲ) ಬಳಸಿ ಕೈಯಿಂದಲೇ ತಯಾರಿಸುವುದರಿಂದ ಇದು ಬಹಳ ಸೂಕ್ಷ್ಮವಾಗಿರುತ್ತದೆ. ಈ ಮುಂಚೆ ಯಂತ್ರದ ಸಹಾಯದಿಂದ ಈ ಚಿನ್ನಾಭರಣಗಳನ್ನು ತಯಾರಿಸುವ ಪ್ರಯೋಗ ನಡೆಯಿತು. ಆದರೆ, ಅದು ನೋಡಲು ರಾಜಕಳೆಯ ಆಭರಣದಂತೆ ಕಾಣುವುದಿಲ್ಲ. ಹಾಗಾಗಿ ಮತ್ತೆ ಕೈಯಿಂದ ತಯಾರಿಸುವ ಪದ್ಧತಿಗೆ ಮರಳಲಾಯಿತು ಎನ್ನುತ್ತಾರೆ ಶ್ರೇಯಾ.

ಈ ಆಭರಣಗಳಲ್ಲಿ ಮಾಣಿಕ್ಯ, ವಜ್ರ, ಪಚ್ಚೆ ಹರಳನ್ನು ಮಾತ್ರ ಬಳಸಲಾಗುತ್ತದೆ. ಇದು ಬಿಟ್ಟರೆ ಬೇರೆ ಬಣ್ಣದ ಯಾವ ಹರಳನ್ನು ಬಳಸುವುದಿಲ್ಲ. ಹಾಗೊಮ್ಮೆ ಬಳಸಿದ್ದೇ ಆದರೆ, ಅದು ಕುಂದನ್ ಆಗುವುದಿಲ್ಲ. ಮಾಣಿಕ್ಯವು ಗಾಢ ಕೆಂಬಣ್ಣದಲ್ಲಿ ಇರಬಾರದು.

ಅದು ತಿಳಿ ಗುಲಾಬಿ ಬಣ್ಣದಲ್ಲಿದ್ದರೆ ಆ ಹರಳುಗಳು ಮಾತ್ರ ಶುದ್ಧವೆಂದು ಪರಿಗಣಿಸಲಾಗುತ್ತದೆ. ಈಗೀಗ ಕುಂದನ್ ಹೆಸರಿನಲ್ಲಿ ನಕಲಿ ಹರಳುಗಳಿರುವ ಆಭರಣಗಳು ಮಾರುಕಟ್ಟೆಯಲ್ಲಿವೆ. ಆಯ್ಕೆ ಮಾಡಿಕೊಳ್ಳುವಾಗ ಗ್ರಾಹಕರು ಎಚ್ಚರಿಕೆಯಿಂದ ಇರಬೇಕು ಎಂಬ ಕಿವಿಮಾತು ಅವರದ್ದು.

ಎಷ್ಟೇ ದುಬಾರಿ ಬೆಲೆಗೆ ಖರೀದಿಸಿದ ಸಾಂಪ್ರದಾಯಿಕ ಆಭರಣಗಳೇ ಇರಲಿ, ಅದು ಆದಷ್ಟು ಹಗುರವಾಗಿರಲಿ ಎಂಬ ಮನಸ್ಥಿತಿ ಈಗಲೂ ಇದೆ. ಇಷ್ಟು ಭಾರದ ಆಭರಣಗಳನ್ನು ತೊಡಲು ಹಲವರು ಇಷ್ಟಪಡುವುದಿಲ್ಲ. ಕೆಲವರು ಇದೇ ವಿನ್ಯಾಸವನ್ನು ಹಗುರ ಮಾದರಿಯಲ್ಲಿ ತಯಾರಿಸಬಹುದೇ ಎಂದು ಕೇಳುವವರಿದ್ದಾರೆ. ಅಂಥವರಿಗಾಗಿ ಚಿನ್ನ ಸ್ವಲ್ಪ ಹೆಚ್ಚು ಬಳಸಿ, ಹರಳುಗಳನ್ನು ಕೂಡಿಸಲಾಗುತ್ತದೆ ಎನ್ನುತ್ತಾರೆ ಅವರು.